## 2005 ರ ಕರ್ನಾಟಕ ಅಧಿನಿಯಮ ಸಂಖ್ಯೆ 6

## ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2005

### ಪ್ರಕರಣಗಳ ಪಟ್ಟಿ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. 2ನೇ ಪ್ರಕರಣದ ತಿದ್ದುಪಡಿ
3. 4ನೇ ಪ್ರಕರಣದ ತಿದ್ದುಪಡಿ
4. 9-ಎ ಹೊಸ ಪ್ರಕರಣದ ಸೇರ್ಪಡೆ
5. 10ನೇ ಪ್ರಕರಣದ ತಿದ್ದುಪಡಿ
6. 11ನೇ ಪ್ರಕರಣದ ತಿದ್ದುಪಡಿ
7. 12ನೇ ಪ್ರಕರಣದ ತಿದ್ದುಪಡಿ
8. 18ನೇ ಪ್ರಕರಣದ ತಿದ್ದುಪಡಿ
9. 20ನೇ ಪ್ರಕರಣದ ತಿದ್ದುಪಡಿ
10. 22ನೇ ಪ್ರಕರಣದ ತಿದ್ದುಪಡಿ
11. 38ನೇ ಪ್ರಕರಣದ ತಿದ್ದುಪಡಿ
12. 50ನೇ ಪ್ರಕರಣದ ತಿದ್ದುಪಡಿ
13. 53ನೇ ಪ್ರಕರಣದ ತಿದ್ದುಪಡಿ
14. 54ನೇ ಪ್ರಕರಣದ ತಿದ್ದುಪಡಿ
15. 62ನೇ ಪ್ರಕರಣದ ತಿದ್ದುಪಡಿ
16. 63ನೇ ಪ್ರಕರಣದ ತಿದ್ದುಪಡಿ
17. 64ನೇ ಪ್ರಕರಣದ ತಿದ್ದುಪಡಿ
18. 69ನೇ ಪ್ರಕರಣದ ತಿದ್ದುಪಡಿ
19. 71ನೇ ಪ್ರಕರಣದ ತಿದ್ದುಪಡಿ
20. 72ನೇ ಪ್ರಕರಣದ ತಿದ್ದುಪಡಿ
21. 73ನೇ ಪ್ರಕರಣದ ತಿದ್ದುಪಡಿ
22. 74ನೇ ಪ್ರಕರಣದ ತಿದ್ದುಪಡಿ
23. 75ನೇ ಪ್ರಕರಣದ ತಿದ್ದುಪಡಿ
24. 76ನೇ ಪ್ರಕರಣದ ತಿದ್ದುಪಡಿ
25. 77ನೇ ಪ್ರಕರಣದ ತಿದ್ದುಪಡಿ
26. 78ನೇ ಪ್ರಕರಣದ ತಿದ್ದುಪಡಿ
27. ಒಂದನೇ ಅನುಸೂಚಿಯ ತಿದ್ದುಪಡಿ
28. ಮೂರನೇ ಅನುಸೂಚಿಯ ತಿದ್ದುಪಡಿ

### ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈಗಿರುವ ಮಾರಾಟ ತೆರಿಗೆ ವ್ಯವಸ್ಥೆಯ ಬದಲಾಗಿ ರೂಪಿಸಲಾಗಿರುವ ಮೌಲ್ಯವರ್ಧಿತ ತೆರಿಗೆ ವಿನ್ಯಾಸದ ಸಂಬಂಧದಲ್ಲಿ ರಾಷ್ಟ್ರಮಟ್ಟದಲ್ಲಿ ಕೈಗೊಂಡ ತೀರ್ಮಾನಗಳನ್ನು ಜಾರಿಗೊಳಿಸುವುದಕ್ಕಾಗಿ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2004ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವಾಗಿದೆ.

ಈ ಸಂದರ್ಭದಲ್ಲಿ ಇತರ ಪ್ರಾಸಂಗಿಕವಾದ ಮತ್ತು ಆನುಷಂಗಿಕವಾದ ಕೆಲವು ಉಪಬಂಧಗಳನ್ನು ಸಹ ಕಲ್ಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2005ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 4]

(ಭಾರತ ಸಂವಿಧಾನದ ಏಳನೇ ಅನುಸೂಚಿಯ 2ನೇ ಪಟ್ಟಿಯ ನಮೂದು 54)

## 2005 ರ ಕರ್ನಾಟಕ ಅಧಿನಿಯಮ ಸಂಖ್ಯೆ 6

(2005 ರ ಮಾರ್ಚ್ ಹತ್ತೊಂಭತ್ತನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2005

(2005 ರ ಮಾರ್ಚ್ ಹತ್ತೊಂಭತ್ತನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ 32) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ (2004ರ ಕರ್ನಾಟಕ ಅಧಿನಿಯಮ 32) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ (5)ನೇ ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(5-ಎ) "ಬ್ರ್ಯಾಂಡ್‌ಮಾಡಿದ" ಎಂದರೆ, ವ್ಯಾಪಾರ ಮತ್ತು ವ್ಯಾಪಾರ ಸರಕು ಗುರುತುಗಳ ಅಧಿನಿಯಮ, 1958ರ (1958ರ ಕೇಂದ್ರ ಅಧಿನಿಯಮ 43) ಅಥವಾ ವ್ಯಾಪಾರ ಗುರುತುಗಳ ಅಧಿನಿಯಮ, 1999ರ (1999ರ ಕೇಂದ್ರ ಅಧಿನಿಯಮ 47) ಅಡಿಯಲ್ಲಿ ಒಂದು ಹೆಸರಿನಲ್ಲಿ ಅಥವಾ ನೋಂದಾಯಿತವಾದ ಅಥವಾ ನೋಂದಣಿಯು ಇತ್ಯರ್ಥದಲ್ಲಿರುವ ಅಥವಾ ನೋಂದಣಿ ವರ್ಗಾವಣೆಯು ಇತ್ಯರ್ಥದಲ್ಲಿರುವ ವ್ಯಾಪಾರ ಗುರುತಿನ ಅಡಿಯಲ್ಲಿ ಮಾರಾಟ ಮಾಡಲಾದ ಯಾವುವೇ ಸರಕುಗಳು."

**3. 4ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ "ಇಪ್ಪತ್ತೈದರ" ಎಂಬ ಪದಕ್ಕೆ "ಹನ್ನೆರಡುವರೆಯ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. 9-ಎ ಹೊಸ ಪ್ರಕರಣದ ಸೇರ್ಪಡೆ.-** ಮೂಲ ಅಧಿನಿಯಮದ 9ನೇ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

**"9-ಎ. ಮೂಲದಲ್ಲೇ ತೆರಿಗೆಯ ಮುರುಗಡೆ (ಕಾಮಗಾರಿ ಕರಾರಿನ ಸಂದರ್ಭದಲ್ಲಿ).-** (1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು ಅಥವಾ ಯಾವುದೇ ರಾಜ್ಯ ಸರ್ಕಾರವು ಅಥವಾ ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯದ ಒಂದು ಕೈಗಾರಿಕಾ, ವಾಣಿಜ್ಯ ಅಥವಾ ಒಂದು ವ್ಯಾಪಾರ ಉದ್ಯಮವು ಅಥವಾ ಜಂಟಿ ವಲಯದಲ್ಲಿನ ಯಾವುದೇ ಉದ್ಯಮವು, ಆಯುಕ್ತರು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಯಾವುದೇ ಇತರ ಕೈಗಾರಿಕಾ, ವಾಣಿಜ್ಯ ಅಥವಾ ವ್ಯಾಪಾರ ಉದ್ಯಮ ಅಥವಾ ಯಾವೊಬ್ಬ ಇತರ ವ್ಯಕ್ತಿ ಅಥವಾ ನಿಕಾಯವು ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಶಾಸನಬದ್ಧ ನಿಕಾಯವು ರಾಜ್ಯದಲ್ಲಿ ಅವರಿಗಾಗಿ ವ್ಯಾಪಾರಿಯು ನಿರ್ವಹಿಸಿದ ಆರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪದ ಕಾಮಗಾರಿ ಕರಾರುಗಳ ಸಂಬಂಧದಲ್ಲಿ ತಾವು ಸಂದಾಯ ಮಾಡುವ ಮೊಬಲಗಿನಿಂದ ಅಧಿನಿಯಮದ ಅಡಿಯಲ್ಲಿ ಅಂಥ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಗೆ ಸಮನಾದ ಮೊತ್ತವನ್ನು ಮುರುಗಡೆ ಮಾಡತಕ್ಕದ್ದು.

(2) ಆ ಮೊಬಲಗು, ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ವ್ಯವಹಾರದ ಸಂದರ್ಭದಲ್ಲಿ, ಅಥವಾ ಭಾರತದ ಗಡಿ ಪ್ರದೇಶಗಳಿಂದ ಹೊರಕ್ಕೆ ರಫ್ತು ಮಾಡುವ, ಅಥವಾ ಭಾರತದ ಗಡಿ ಪ್ರದೇಶದಿಂದ ಒಳಕ್ಕೆ ಆಮದು ಮಾಡಿಕೊಳ್ಳುವ

ಸಂದರ್ಭದಲ್ಲಿ ಅಥವಾ ರಾಜ್ಯದ ಹೊರಗೆ ಮಾಡಿದ ಯಾವುವೇ ಸರಕುಗಳ ಮಾರಾಟದ ಸಂಬಂಧದಲ್ಲಿ ಅವನು ಸಂದಾಯ ಮಾಡಬೇಕಾಗಿದ್ದ ಮೊಬಲಗಾಗಿದ್ದರೆ (1)ನೇ ಉಪ ಪ್ರಕರಣದ ಅಡಿಯಲ್ಲಿ ಅಂಥ ಯಾವ ಮುರುಗಡೆಯನ್ನು ಮಾಡತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ ಅಡಿಯಲ್ಲಿಯ ಮುರುಗಡೆಯನ್ನು, ವ್ಯಾಪಾರಿಯು ಲೆಕ್ಕಹಾಕಿದಂತೆ ಸಂದಾಯ ಮಾಡತಕ್ಕ ತೆರಿಗೆಯ ಆಧಾರದ ಮೇಲೆ ಪ್ರಾಧಿಕಾರಿಯು ಮಾಡತಕ್ಕದ್ದು.

---

ಕರ್ನಾಟಕ ರಾಜ್ಯ ಪತ್ರದ ಭಾಗ–IVಎ ವಿಶೇಷ ಪತ್ರಿಕೆ ಸಂಖ್ಯೆ: 408 ದಿನಾಂಕ: 19.3.2005 ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 10 ಶಾಸನ 2005

(4) ಯಾವೊಬ್ಬ ವ್ಯಾಪಾರಿಯು, ಲೆಕ್ಕಹಾಕಿದಂತೆ ಸಂದಾಯ ಮಾಡತಕ್ಕ ತೆರಿಗೆಯು ನಿರ್ವಹಿಸಿದ ಕಾಮಗಾರಿ ಕರಾರಿಗೆ ಸಂದಾಯ ಮಾಡತಕ್ಕ ತೆರಿಗೆಗಿಂತ ಶೇಕಡಾ ಹದಿನೈದಕ್ಕೂ ಮೀರಿ ಕಡಿಮೆ ಇದ್ದಲ್ಲಿ ಮತ್ತು ಹಾಗೆ ತಿಳಿದುಬಂದ ಮೇಲೆ ಪ್ರಾಧಿಕಾರಿಯು, ಆ ಪ್ರಾಧಿಕಾರಿ ಅಥವಾ ವ್ಯಾಪಾರಿಯು ಸಲ್ಲಿಸಿದ ಅರ್ಜಿ ಮೇಲೆ ಆ ಪ್ರದೇಶದ ತೆರಿಗೆ ನಿರ್ಧರಣಾ ಪ್ರಾಧಿಕಾರಿಯು ಅಥವಾ ವ್ಯಾಪಾರಿಯ ತೆರಿಗೆ ನಿರ್ಧರಣಾ ಪ್ರಾಧಿಕಾರಿಯು ನೀಡಿದ ಪ್ರಮಾಣ ಪತ್ರದ ಆಧಾರದ ಮೇಲೆ ತದನಂತರ ಸಂದಾಯವಾಗತಕ್ಕ ಯಾವುದೇ ಮೊಬಲಗಿನಿಂದ ಮುರಿದುಕೊಳ್ಳತಕ್ಕದ್ದು. ಪ್ರಾಧಿಕಾರಿ ಅಥವಾ ವ್ಯಾಪಾರಿಯು ಸಲ್ಲಿಸಿದ ಸದರಿ ಅರ್ಜಿಯನ್ನು ತೆರಿಗೆ ನಿರ್ಧರಣೆ ಪ್ರಾಧಿಕಾರಿಯು ಅದನ್ನು ಸ್ವೀಕರಿಸಿದ ದಿನಾಂಕದಿಂದ ಹತ್ತು ದಿನಗಳ ಒಳಗೆ ವಿಲೆ ಮಾಡತಕ್ಕದ್ದು, ತಪ್ಪಿದಲ್ಲಿ ಪ್ರಮಾಣಪತ್ರದ ನೀಡಿಕೆಯವರೆಗೆ ವ್ಯಾಪಾರಿಯು ಲೆಕ್ಕ ಹಾಕಿದಂತೆಯೇ ಪ್ರಾಧಿಕಾರಿಯು ಮುರುಗಡೆ ಮಾಡತಕ್ಕದ್ದು.

(5) (1)ನೇ ಉಪಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವ ಪ್ರಾಧಿಕಾರಿಯು, ನಿಯಮಿಸಲಾದ ಪ್ರಾಧಿಕಾರಕ್ಕೆ ನಿಯಮಿಸಲಾದ ನಮೂನೆಯಲ್ಲಿ ಹಿಂದಿನ ತಿಂಗಳಿನ ಅವಧಿಯಲ್ಲಿ ಕಡಿತಗೊಳಿಸಿದ ತೆರಿಗೆಯ ವಿವರಗಳನ್ನು ಒಳಗೊಂಡಂತೆ ವಿವರಪಟ್ಟಿಯನ್ನು ಪ್ರತಿ ತಿಂಗಳೂ ಕಳುಹಿಸತಕ್ಕದ್ದು ಹಾಗೂ ಹಾಗೆ ಕಡಿತಗೊಳಿಸಿದ ತೆರಿಗೆಯ ಪೂರ್ಣ ಮೊಬಲಗನ್ನು ಅಂಥ ಮುರುಗಡೆಯನ್ನು ಮಾಡಿದ ಹಿಂದಿನ ತಿಂಗಳು ಮುಕ್ತಾಯವಾದ ಇಪ್ಪತ್ತು ದಿನಗಳೊಳಗೆ ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡುವ ಮೊಬಲಗನ್ನು 42ನೇ ಪ್ರಕರಣದ ಉದ್ದೇಶಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇದ್ದ ಮೊಬಲಗು ಎಂದು ಭಾವಿಸತಕ್ಕದ್ದು:

(6) (5)ನೇ ಉಪ ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದಾಗ, ನಿಯಮಿಸಲಾದ ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆ ನಡೆಸಿದ ತರುವಾಯ ಮತ್ತು ಸಂಬಂಧಿಸಿದ ಪ್ರಾಧಿಕಾರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ತರುವಾಯ, ತನ್ನ ಅತ್ಯುತ್ತಮ ವಿವೇಚನೆಯ ಪ್ರಕಾರ ಅಂಥ ಪ್ರಾಧಿಕಾರಿಯು ಈ ಉಪಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ ಮೊಬಲಗನ್ನು ತೀರ್ಮಾನಿಸತಕ್ಕದ್ದು ಹಾಗೂ ಹಾಗೆ ತೀರ್ಮಾನಿಸಿದ ಮೊಬಲಗನ್ನು 42ನೇ ಪ್ರಕರಣದ ಉದ್ದೇಶಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ತೆರಿಗೆ ಎಂದು ಭಾವಿಸತಕ್ಕದ್ದು.

(7) (5)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯದ ತರುವಾಯ ಮುರುಗಡೆ ಮಾಡಿದ ತೆರಿಗೆಯನ್ನು ಸಂದಾಯ ಮಾಡುವಲ್ಲಿ ಹತ್ತು ದಿನಗಳನ್ನು ಮೀರಿ ತಪ್ಪಿದಲ್ಲಿ, (1)ನೇ ಉಪಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವ ಪ್ರಾಧಿಕಾರಿಯು, ಅಂಥ ತಪ್ಪುವಿಕೆಯು ಮುಂದುವರೆದ ಅವಧಿಯಲ್ಲಿ 37ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಬಡ್ಡಿಗೆ ಸಮನಾದ ಮೊತ್ತವನ್ನು ದಂಡದ ರೂಪದಲ್ಲಿ ಸಂದಾಯ ಮಾಡತಕ್ಕದ್ದು.

(8) (1)ನೇ ಉಪಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವ ಪ್ರಾಧಿಕಾರಿಯು ಯಾರಿಂದ ಹಾಗೆ ಮುರುಗಡೆ ಮಾಡಲಾಗಿದೆಯೋ ಆ ವ್ಯಾಪಾರಿಗೆ, ನಿಯಮಿಸಲಾದ ಪ್ರಾಧಿಕಾರದಿಂದ ಪಡೆದ ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡ ಒಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು.

(9) (5)ನೇ ಉಪಪ್ರಕರಣಕ್ಕೆ ಅನುಸಾರವಾಗಿ ಮುರುಗಡೆ ಮೂಲಕ ಮಾಡಿದ ತೆರಿಗೆ ಸಂದಾಯವು ಕಾಮಗಾರಿ ಕರಾರನ್ನು ಜಾರಿಗೊಳಿಸುವ ವ್ಯಾಪಾರಿಯಿಂದ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ತೆರಿಗೆಯನ್ನು ಇತರ ಯಾವುದೇ ರೀತಿಯ ವಸೂಲು ಮಾಡುವುದಕ್ಕೆ ಬಾಧಕವಾಗತಕ್ಕದ್ದಲ್ಲ.

(10) (5)ನೇ ಉಪಪ್ರಕರಣದ ಅಡಿಯಲ್ಲಿ ಕಾಮಗಾರಿ ಕರಾರಿನ ಸಂಬಂಧದಲ್ಲಿಯ ತೆರಿಗೆಯನ್ನು ಜಮಾ ಮಾಡಿದ್ದರೆ, ವ್ಯಾಪಾರಿಯು ಅಂಥ ಕಾಮಗಾರಿ ಕರಾರಿನ ಸಂಬಂಧದಲ್ಲಿ ಯಾವುದೇ ಅವಧಿಗಾಗಿ ಸಂದಾಯ ಮಾಡಬೇಕಾದ ತೆರಿಗೆಯನ್ನು ಸದರಿ ಉಪಪ್ರಕರಣದ ಅಡಿಯಲ್ಲಿ ಈಗಾಗಲೇ ಜಮಾ ಮಾಡಿದ ಮೊಬಲಗಿನಷ್ಟು ಕಡಿಮೆ ಮಾಡತಕ್ಕದ್ದು.

(11) ಅಂಥ ಕಾಮಗಾರಿ ಕರಾರಿನ ಮೇಲಿನ ತೆರಿಗೆಯನ್ನು ಈಗಾಗಲೇ ಸಲ್ಲಿಸಲಾಗಿದೆಯೆಂಬುದನ್ನು ಮತ್ತು ಆ ರೀತಿಯಾಗಿ ಸಲ್ಲಿಸಲಾದ ತೆರಿಗೆಯ ನಿಖರವಾದ ಮೊಬಲಗನ್ನು ರುಜುವಾತುಪಡಿಸುವ ಭಾರವು, (10)ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆ ಕಡಿಮೆ ಮಾಡಬೇಕೆಂದು ಕ್ಲೇಮು ಮಾಡುವ ವ್ಯಾಪಾರಿಯ ಮೇಲೆ ಇರತಕ್ಕದ್ದು."

**5. 10ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 10ನೇ ಪ್ರಕರಣದಲ್ಲಿ, (2)ನೇ ಉಪ-ಪ್ರಕರಣದಲ್ಲಿ, "17, 18 ಮತ್ತು 19" ಎಂಬ ಅಂಕಿಗಳು, ವಿರಾಮ ಚಿಹ್ನೆ ಮತ್ತು ಪದಕ್ಕೆ "17 ಮತ್ತು 18" ಎಂಬ ಅಂಕಿಗಳು ಮತ್ತು ಪದವನ್ನು ಪ್ರತಿಯೋಜಿಸತಕ್ಕದ್ದು.

**6. 11ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 11ನೇ ಪ್ರಕರಣದಲ್ಲಿ (ಎ) ಉಪ ಪ್ರಕರಣದಲ್ಲಿ, (3)ನೇ ಖಂಡದಲ್ಲಿ "ಖರೀದಿಸಿದ" ಎಂಬ ಪದಕ್ಕೆ ಮೊದಲು "ಕಾಮಗಾರಿ ಕರಾರಿನ ನಿರ್ವಹಣೆಯಲ್ಲಿ ವರ್ಗಾವಣೆ ಮಾಡಿದವುಗಳು ಒಳಗೊಂಡಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

**7. 12ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 12ನೇ ಪ್ರಕರಣದಲ್ಲಿ (1)ನೇ ಉಪ ಪ್ರಕರಣದಲ್ಲಿ, "ಬಳಸಲು ಮಾಡಿದ ಬಂಡವಾಳ ಸರಕುಗಳ ಖರೀದಿಯ ಸಂಬಂಧದಲ್ಲಿ ನೋಂದಾಯಿತ ವ್ಯಾಪಾರಿಗೆ" ಎಂಬ ಪದಗಳಿಗೆ ಮೊದಲು "ಈ ಅಧಿನಿಯಮದ ಪ್ರಾರಂಭದಂದು ಅಥವಾ ತರುವಾಯ" ಎಂಬ ಪದಗಳನ್ನು ಸೇರಿಸತಕ್ಕದ್ದು.

**8. 18ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 18ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"18. ಮಧ್ಯಕಾಲೀನ ಉಪಬಂಧಗಳು.-** 2004ರ ಏಪ್ರಿಲ್ ಒಂದನೇ ದಿನಾಂಕದಂದು ಅಥವಾ ತರುವಾಯ ಖರೀದಿಸಿದ ಮತ್ತು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ತಯಾರಿಕೆ ಅಥವಾ ಮರು ಮಾರಾಟಕ್ಕಾಗಿ ಬಳಸಿದ ಸರಕುಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ದಾಸ್ತಾನಿನ ಮೇಲೆ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ, 25) ಅಡಿಯಲ್ಲಿ ಸಂದಾಯ ಮಾಡಿದ ತೆರಿಗೆಯ ಸಂಬಂಧದಲ್ಲಿ ಪರಿಹಾರವನ್ನು ಒಳಗೊಳ್ಳುವ ಮಧ್ಯಕಾಲೀನ ಉಪಬಂಧಗಳು ನಿಯಮಿಸಲಾದಂಥವುಗಳಾಗಿರತಕ್ಕದ್ದು."

**9. 20ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 20ನೇ ಪ್ರಕರಣದಲ್ಲಿ,-

(i) (1)ನೇ ಉಪ ಪ್ರಕರಣದಲ್ಲಿ,- (ಸಿ) ಮತ್ತು (ಡಿ) ಖಂಡಗಳನ್ನು ಬಿಟ್ಟುಬಿಡತಕ್ಕದ್ದು.

(ii) "10ನೇ ಪ್ರಕಣದಲ್ಲಿಯ" ಎಂಬ ಅಂಕಿ, ಅಕ್ಷರ ಹಾಗೂ ಪದದ ಮೊದಲು, "ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು" ಎಂಬ ಪದಗಳನ್ನು ಸೇರಿಸತಕ್ಕದ್ದು.

(iii) (2)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು:-

"(2) ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದ ಪ್ರಾಧಿಕಾರಗಳ ಮೂಲಕ ಸ್ಥಾಪಿಸಲಾದ ಯಾವುದೇ ವಿಶೇಷ ಆರ್ಥಿಕ ವಲಯ ಯೋಜನೆಯಲ್ಲಿ ಇರುವಂಥ ಒಂದು ಘಟಕವಾಗಿರುವ ಒಬ್ಬ ನೋಂದಾಯಿತ ವ್ಯಾಪಾರಿಯು ಹೂಡುವಳಿಗಳ ಖರೀದಿಯ ಮೇಲೆ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಿದ ತೆರಿಗೆಯನ್ನು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು 10ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದಂತೆ, ಅಂಥ ವ್ಯಾಪಾರಿಯು ಸಂದಾಯ ಮಾಡತಕ್ಕ ಹುಟ್ಟುವಳಿ ತೆರಿಗೆಯಿಂದ ವಜಾಮಾಡತಕ್ಕದ್ದು."

(iv) ವಿವರಣೆ-2 ನ್ನು ಬಿಟ್ಟುಬಿಡತಕ್ಕದ್ದು.

**10. 22ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 22ನೇ ಪ್ರಕರಣದಲ್ಲಿ,-

(i) (1)ನೇ ಮತ್ತು (2)ನೇ ಉಪ-ಪ್ರಕರಣಗಳಲ್ಲಿ, "2003" ಎಂಬ ಅಂಕಿಗಳಿಗೆ "2005" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

(ii) (9)ನೇ ಉಪ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(9-ಎ) ಕಾಮಗಾರಿಗಳ ಕರಾರಿನ ನಿರ್ವಹಣೆಯಲ್ಲಿ ನಿರತನಾದ ಪ್ರತಿಯೊಬ್ಬ ವ್ಯಾಪಾರಿಯು, ನೋಂದಾಯಿತನಾಗಲು ಬದ್ಧನಾಗಿರತಕ್ಕದ್ದು ಮತ್ತು ಯಾವ ತಿಂಗಳಲ್ಲಿ ಕಾಮಗಾರಿಗಳ ಕರಾರಿನ ನಿರ್ವಹಣೆಯನ್ನು ಕೈಗೊಳ್ಳಲಾಯಿತೋ ಆ ತಿಂಗಳಿನ ಮುಕ್ತಾಯದ ತರುವಾಯ ಅಂಥ ಬದ್ಧತೆಯನ್ನು ವರದಿ ಮಾಡತಕ್ಕದ್ದು."

**11. 38ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 38ನೇ ಪ್ರಕರಣದಲ್ಲಿ, (5)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(6). ಈ ಅಧಿನಿಯಮದಲ್ಲಿ ಏನೇ ಇದ್ದರೂ, ವ್ಯಾಪಾರಿಯು ಒಂದು ನಿಗಮಿತ ನಿಕಾಯವಾಗಿದ್ದಲ್ಲಿ ಮತ್ತು ಒಂದಕ್ಕಿಂತ ಹೆಚ್ಚು ವ್ಯವಹಾರದ ಸ್ಥಳಗಳನ್ನು ಹೊಂದಿದ್ದಲ್ಲಿ, ಆಯುಕ್ತನು, ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಮತ್ತು ವ್ಯಾಪಾರಿಯ ಸಮ್ಮತಿಯೊಡನೆ, ವ್ಯವಹಾರಗಳ ಅಂಥ ಪ್ರತಿಯೊಂದು ಪ್ರದೇಶವನ್ನು ತೆರಿಗೆ ವಿಧಿಸುವಿಕೆ, ನಿರ್ಧರಣೆ, ಮತ್ತು ಸಂಗ್ರಹಣೆಯ ಉದ್ದೇಶಗಳಿಗಾಗಿ ಪ್ರತ್ಯೇಕ ಘಟಕಗಳೆಂದು ಪರಿಗಣಿಸತಕ್ಕದ್ದು ಮತ್ತು ತದನಂತರ ನೋಂದಣಿ, ವಿವರ ಪಟ್ಟಿಕೆಗಳ ಸಲ್ಲಿಕೆ, ತೆರಿಗೆ ನಿರ್ಧರಣೆ ಮತ್ತು ತೆರಿಗೆ ಸಂಗ್ರಹಣೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಎಲ್ಲಾ ಉಪಬಂಧಗಳನ್ನು ಅಂಥ ವ್ಯವಹಾರ ಸ್ಥಳಗಳು ಪ್ರತ್ಯೇಕ ಘಟಕಗಳಾಗಿದ್ದರೆ ಹೇಗೋ ಹಾಗೆ ಅವುಗಳಿಗೆ ಅನ್ವಯವಾಗತಕ್ಕದ್ದು."

**12. 50ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 50ನೇ ಪ್ರಕರಣದಲ್ಲಿ (1)ನೇ ಉಪ ಪ್ರಕರಣದಲ್ಲಿ, "ಶೇಕಡಾ ಹನ್ನೆರಡರ" ಎಂಬ ಪದಗಳಿಗೆ "ಶೇಕಡಾ ಆರರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**13. 53ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 53ನೇ ಪ್ರಕರಣದಲ್ಲಿ,-

(i) (2)ನೇ ಉಪ ಪ್ರಕರಣದಲ್ಲಿ, (ಸಿ) ಖಂಡದಲ್ಲಿ,- "ಚೆಕ್‌ಪೋಸ್ಟಿನ ಅಥವಾ ಸುಂಕದ ಕಟ್ಟೆಯ ಪ್ರಭಾರದಲ್ಲಿರುವ ಯಾವೊಬ್ಬ ಅಧಿಕಾರಿಯ ಅಥವಾ ಇದಕ್ಕಾಗಿಯೇ ರಾಜ್ಯ ಸರ್ಕಾರದಿಂದ ಪ್ರಾಧಿಕೃತನಾಗಬಹುದಾದ ಯಾವೊಬ್ಬ ಇತರ ಅಧಿಕಾರಿಯ ಎದುರಿಗೆ, (ಎ) ಮತ್ತು (ಬಿ) ಉಪಖಂಡಗಳಲ್ಲಿ" ಎಂಬ ಪದಗಳು, ಆವರಣ ಚಿಹ್ನೆಗಳು ಮತ್ತು ಅಕ್ಷರಗಳಿಗೆ "ತಾನು ಹೋಗಬೇಕಾದ ಸ್ಥಳಕ್ಕೆ ಸರಕಿನ ಸಾಗಣೆಯು ರಾಜ್ಯದಲ್ಲಿನ ಯಾವ ಸ್ಥಳದಿಂದ ಪ್ರಾರಂಭವಾಗುತ್ತದೋ ಆ ಸ್ಥಳದಿಂದ ಸಾಧಾರಣವಾಗಿ ಸಾಗುವ ಮಾರ್ಗದಲ್ಲಿ ಇರುವಂಥ ಮೊದಲ ಚೆಕ್‌ಪೋಸ್ಟ್‌ನಲ್ಲಿ ಅಥವಾ ಸುಂಕದ ಕಟ್ಟೆಯಲ್ಲಿ ಸದರಿ ಚೆಕ್‌ಪೋಸ್ಟಿನ ಅಥವಾ ಸುಂಕದ ಕಟ್ಟೆಯ ಪ್ರಭಾರದಲ್ಲಿರುವ ಯಾವೊಬ್ಬ ಅಧಿಕಾರಿಯ ಅಥವಾ ಇದಕ್ಕಾಗಿಯೇ ರಾಜ್ಯ ಸರ್ಕಾರದಿಂದ ಪ್ರಾಧಿಕೃತನಾಗಬಹುದಾದ ಯಾವೊಬ್ಬ ಇತರ ಅಧಿಕಾರಿಯ ಎದುರಿಗೆ ವರದಿ ಮಾಡಿಕೊಳ್ಳತಕ್ಕದ್ದು ಮತ್ತು (ಎ) ಮತ್ತು (ಬಿ) ಖಂಡಗಳಲ್ಲಿ" ಎಂಬ ಪದಗಳು, ಆವರಣ ಚಿಹ್ನೆಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

(ii) (12)ನೇ ಉಪಪ್ರಕರಣದ (ಎ) ಖಂಡದಲ್ಲಿ (i)ನೇ ಉಪ ಖಂಡದಲ್ಲಿ "(ಇ) ಖಂಡದ ಮತ್ತು" ಎಂಬ ಆವರಣ ಚಿಹ್ನೆ, ಅಕ್ಷರ ಮತ್ತು ಪದಗಳಿಗೆ "(ಸಿ) ಖಂಡದ ಅಥವಾ" ಎಂಬ ಆವರಣ ಚಿಹ್ನೆಗಳು, ಅಕ್ಷರ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) (14)ನೇ ಉಪ ಪ್ರಕರಣದಲ್ಲಿ (ಡಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಡಿ) ಸರಕುಗಳನ್ನು ಅಥವಾ ಸರಕು ವಾಹನವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಮೊದಲು ಅಥವಾ ಸ್ವಾಧೀನಕ್ಕೆ ತೆಗೆದುಕೊಂಡ ತರುವಾಯ ಹತ್ತು ದಿನಗಳೊಳಗೆ ಮಾಲೀಕ ಅಥವಾ ಸರಕು ವಾಹನದ

ಪ್ರಭಾರದಲ್ಲಿರುವ ವ್ಯಕ್ತಿಯು ಅಥವಾ ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲ್ಪಟ್ಟ ವ್ಯಾಪಾರಿಯು, ವಿಧಿಸಿದ ದಂಡವನ್ನು ಸಂದಾಯ ಮಾಡಿದರೆ ಅಂಥ ಸ್ವಾಧೀನವನ್ನು ತೆಗೆದುಕೊಂಡ ಅಧಿಕಾರಿಯು ಸರಕುಗಳನ್ನು ಅಥವಾ ಸರಕು ವಾಹನವನ್ನು ಹಾಗೆ ಸಂದಾಯವನ್ನು ಮಾಡುವ ವ್ಯಕ್ತಿಗೆ ಕೂಡಲೇ ಹಿಂದಿರುಗಿಸತಕ್ಕದ್ದು."

**14. 54ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 54ನೇ ಪ್ರಕರಣದಲ್ಲಿ (10)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(10) ಒಬ್ಬ ವ್ಯಕ್ತಿಯ ಮಾಲೀಕತ್ವದಲ್ಲಿರುವ ಒಂದು ವಾಹನವನ್ನು ಸಾಗಾಣಿಕೆ ಅಥವಾ ಅದೇ ಬಗೆಯ ಇತರ ಏಜನ್ಸಿಯೂ ಸೇರಿದಂತೆ ಇನ್ನೊಬ್ಬ ವ್ಯಕ್ತಿಯು ಸರಕು ಸಾಗಾಣಿಕೆಗಾಗಿ ಬಾಡಿಗೆಗಾಗಿ ತೆಗೆದುಕೊಂಡಿದ್ದರೆ ಇಬ್ಬರೂ ವ್ಯಕ್ತಿಗಳನ್ನು ಈ ಪ್ರಕರಣದ ಉದ್ದೇಶಕ್ಕಾಗಿ ವಾಹನದ ಮಾಲೀಕರೆಂದು ಭಾವಿಸತಕ್ಕದ್ದು ಮತ್ತು ಅವರು ಸಂದಾಯ ಮಾಡತಕ್ಕ ತೆರಿಗೆ ಅಥವಾ ದಂಡದ ಯಾವುದೇ ಮೊಬಲಗನ್ನು ಸಂದಾಯ ಮಾಡಲು ಜಂಟಿಯಾಗಿ ಮತ್ತು ವೈಯಕ್ತಿಕವಾಗಿ ಹೊಣೆಗಾರರಾಗಿರತಕ್ಕದ್ದು."

**15. 62ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 62ನೇ ಪ್ರಕರಣದಲ್ಲಿ,

(i) (4)ನೇ ಉಪಪ್ರಕರಣದಲ್ಲಿ, (ಸಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

"(ಸಿ) (i) ಅಪೀಲು ಪ್ರಾಧಿಕಾರಿಯು, ತನ್ನ ವಿವೇಚನಾನುಸಾರ, ಅಪೀಲುದಾರನು ನಿಯಮಿಸಲಾದ ಅಪೀಲಿನ ನಮೂನೆಯ ಜೊತೆಯಲ್ಲಿ ತೆರಿಗೆಯ ಅರ್ಧದಷ್ಟನ್ನು ಸಂದಾಯ ಮಾಡಿದ್ದರೆ, ಇನ್ನುಳಿದ ಅರ್ಧದಷ್ಟು ತೆರಿಗೆಯ ಸಂದಾಯಕ್ಕೆ ತಡೆ ನೀಡಬಹುದು.

(ii) ಯಾವುದೇ ತೆರಿಗೆಯ ಅಥವಾ ಇತರ ಮೊಬಲಗಿನ ವಸೂಲಿಯ ವ್ಯವಹರಣೆಗಳನ್ನು ತಡೆಯುವುದಕ್ಕಾಗಿ ಅರ್ಜಿದಾರನು ಸಲ್ಲಿಸಿದ ಅರ್ಜಿಯನ್ನು ಅಪೀಲು ಪ್ರಾಧಿಕಾರವು ಅಂಥ ಅರ್ಜಿಯ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ವಿಲೆ ಮಾಡದಿದ್ದಲ್ಲಿ, ಅಂಥ ತೆರಿಗೆಯ ಅಥವಾ ಇತರ ಮೊಬಲಗಿನ ವಸೂಲಿಯ ವ್ಯವಹರಣೆಗಳನ್ನು ತಡೆಯುವ ಆದೇಶವನ್ನು ವಿವಾದಿತ ತೆರಿಗೆಯ ಅರ್ಧದಷ್ಟು ಸಂದಾಯ ಮಾಡುವ ಮತ್ತು ಅಂಥ ತೆರಿಗೆಯ ಇನ್ನುಳಿದ ಅರ್ಧದಷ್ಟನ್ನು ಅಥವಾ ಇತರ ಮೊಬಲಗನ್ನು ಮುಂದಿನ ಹದಿನೈದು ದಿನಗಳ ಅವಧಿಯೊಳಗೆ ಸಲ್ಲಿಸುವ ಬಗ್ಗೆ ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ತೃಪ್ತಿಕರವಾಗುವಂತೆ ಸಾಕಷ್ಟು ಭದ್ರತೆ ನೀಡುವ ಷರತ್ತಿಗೆ ಒಳಪಟ್ಟು ಅಪೀಲು ಪ್ರಾಧಿಕಾರವು ತಡೆಯಾಜ್ಞೆ ನೀಡಿದೆಯೆಂದು ಭಾವಿಸತಕ್ಕದ್ದು."

(ii) (ಇ) ಖಂಡದಲ್ಲಿ "ತೆರವಾಗತಕ್ಕದ್ದು" ಎಂಬ ಪದಗಳ ತರುವಾಯ "ಮತ್ತು ಅಪೀಲು ಪ್ರಾಧಿಕಾರವು ಸದರಿ ತೆರಿಗೆ ಅಥವಾ ಇತರ ಮೊಬಲಗಿನ ವಸೂಲಿಯ ವ್ಯವಹರಣೆಗಳನ್ನು ತಡೆಯುವ ಯಾವುದೇ ಮುಂದಿನ ಆದೇಶವನ್ನು ಮಾಡತಕ್ಕದ್ದಲ್ಲ" ಎಂಬ ಪದಗಳನ್ನು ಸೇರಿಸತಕ್ಕದ್ದು.

(iii) (6)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,-

"(6-ಎ) (i) ಅಪೀಲು ಪ್ರಾಧಿಕಾರವು, ತನ್ನ ಮುಂದಿರುವ ಅಪೀಲನ್ನು ವಿಲೆ ಮಾಡುವಾಗ ತೆರಿಗೆ ನಿರ್ಧರಣೆ ಮಾಡಲು ಅಥವಾ ಹೊಸದಾಗಿ ಆದೇಶವನ್ನು ಮಾಡಲು ಪುನರ್ ವಿಚಾರಣೆಗಾಗಿ ಪ್ರಕರಣವನ್ನು ವಾಪಸು ಕಳುಹಿಸತಕ್ಕದ್ದಲ್ಲ. ಆದರೆ, ಅಪೀಲನ್ನು ಅದರ ಗುಣ-ದೋಷಗಳ ಮೇಲೆ, ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಳ್ಳುವುದು ಅವಶ್ಯಕವಾಗಿದ್ದರೆ ಅದನ್ನು ತೆಗೆದುಕೊಂಡು ತಾನು ಸೂಕ್ತವೆಂದು ಭಾವಿಸುವಂತೆ ವಿಲೆ ಮಾಡಲು ಮುಂದುವರಿಯತಕ್ಕದ್ದು.

(ii) ಅಪೀಲು ಪ್ರಾಧಿಕಾರವು, ಪ್ರಕರಣದ ಚುನಾವಣೆಯು ಮುಕ್ತಾಯವಾದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಅಪೀಲನ್ನು ವಿಲೆ ಮಾಡಿ ಆದೇಶವನ್ನು ಹೊರಡಿಸತಕ್ಕದ್ದು ಮತ್ತು ಪ್ರಕರಣದ ಅಸಾಧಾರಣ ಮತ್ತು ವಿಶೇಷ ಸನ್ನಿವೇಶಗಳ ಕಾರಣಗಳಿಂದಾಗಿ ಹಾಗೆ ಮಾಡುವುದು

ಕಾರ್ಯಸಾಧ್ಯವಾಗದಿದ್ದಲ್ಲಿ, ಅಪೀಲು ಪ್ರಾಧಿಕಾರಿಯು, ಆದೇಶ ಹೊರಡಿಸುವುದಕ್ಕಾಗಿ ಮುಂದಿನ ಒಂದು ದಿನಾಂಕವನ್ನು ನಿಗದಿಪಡಿಸತಕ್ಕದ್ದು ಮತ್ತು ಅಂಥ ದಿನಾಂಕವು ಪ್ರಕರಣದ ಸುನಾವಣೆಯು ಮುಕ್ತಾಯಗೊಂಡ ದಿನದಿಂದ ಅರವತ್ತು ದಿನಗಳಿಗೆ ಮೀರದ ದಿನಾಂಕವಾಗಿರತಕ್ಕದ್ದು ಮತ್ತು ಹಾಗೆ ನಿಗದಿಪಡಿಸಲಾದ ದಿನದ ಬಗ್ಗೆ ಅಪೀಲುದಾರನಿಗೆ ಸೂಕ್ತ ನೋಟೀಸನ್ನು ನೀಡತಕ್ಕದ್ದು."

16. **63ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 63ನೇ ಪ್ರಕರಣದಲ್ಲಿ,-

(i) (4)ನೇ ಉಪಪ್ರಕರಣದಲ್ಲಿ "ಯಾವೊಬ್ಬ ವ್ಯಕ್ತಿಯು ಅಪೀಲು ಸಲ್ಲಿಸಿದ ಸಂದರ್ಭದಲ್ಲಿ" ಎಂಬ ಪದಗಳ ತರುವಾಯ "ತೆರಿಗೆಯ ಅಥವಾ ವಿವಾದಿತ ಇತರೆ ಮೊಬಲಗಿನ ಅರ್ಧದಷ್ಟನ್ನು ಸಂದಾಯ ಮಾಡಿದ ಬಗ್ಗೆ ರುಜುವಾತಿನೊಡನೆ ಮತ್ತು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (6)ನೇ ಉಪ ಪ್ರಕರಣದಲ್ಲಿ (ಬಿ) ಖಂಡವನ್ನು ಬಿಟ್ಟುಬಿಡತಕ್ಕದ್ದು.

(iii) (7)ನೇ ಉಪಪ್ರಕರಣಕ್ಕೆ ಈ ಮುಂದಿನವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(7) (ಎ) ಅಪೀಲುದಾರನು, ನಿಯಮಿಸಲಾದ ಅಪೀಲು ನಮೂನೆಯೊಡನೆ ತೆರಿಗೆಯ ಅಥವಾ ವಿವಾದಿತ ಇತರ ಮೊಬಲಗಿನ ಅರ್ಧವನ್ನು ಸಂದಾಯ ಮಾಡಿದರೆ ಅಪೀಲು ನ್ಯಾಯಾಧಿಕರಣವು ತನ್ನ ವಿವೇಚನಾನುಸಾರ ತೆರಿಗೆಯ ಅಥವಾ ವಿವಾದಿತ ಇತರ ಮೊಬಲಗಿನ ಇನ್ನುಳಿದ ಅರ್ಧ ಭಾಗದ ಸಂದಾಯಕ್ಕೆ ತಡೆ ನೀಡಬಹುದು.

(ಬಿ) ಅಪೀಲು ಪ್ರಾಧಿಕಾರವು ಎರಡನೇ ಪರಂತುಕದ ಅಡಿ ಬರುವಂಥ ಅಪೀಲುಗಳನ್ನು ತೆರಿಗೆಯ ಅಥವಾ ಇತರ ಮೊಬಲಗಿನ ಅರ್ಧದ ವಸೂಲಿಯ ವ್ಯವಹರಣೆಗಳ ತಡೆಯಾಜ್ಞೆ ದಿನಾಂಕದಿಂದ ಒಂದು ನೂರಾಎಂಭತ್ತು ದಿನಗಳೊಳಗೆ ವಿಲೆ ಮಾಡತಕ್ಕದ್ದು ಮತ್ತು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂಥ ಅಪೀಲನ್ನು ವಿಲೆ ಮಾಡದಿದ್ದರೆ ಸದರಿ ಅವಧಿಯ ತರುವಾಯ ಅಂಥ ಅಪೀಲು ತೆರವಾಗತಕ್ಕದ್ದು ಮತ್ತು ಅಪೀಲು ಪ್ರಾಧಿಕಾರವು ಸದರಿ ತೆರಿಗೆಯ ಅಥವಾ ಅಂಥ ಮೊಬಲಗಿನ ವಸೂಲಿಯ ವ್ಯವಹರಣೆಗಳನ್ನು ತಡೆಯುವ ಯಾವುದೇ ಆದೇಶವನ್ನು ಮತ್ತೆ ಮಾಡತಕ್ಕದ್ದಲ್ಲ."

17. **64ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 64ನೇ ಪ್ರಕರಣದಲ್ಲಿ, (2)ನೇ ಉಪ ಪ್ರಕರಣದಲ್ಲಿ "ತನಗೆ ಅಧೀನನಾದ ಯಾವೊಬ್ಬ ಅಧಿಕಾರಿಯು" ಎಂಬ ಪದಗಳ ತರುವಾಯ "ಅಥವಾ 60ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಸ್ಪಷ್ಟೀಕರಣ ಮತ್ತು ಪೂರ್ವಭಾವಿ ನಿರ್ಣಯಗಳ ಪ್ರಾಧಿಕಾರವು" ಎಂಬ ಪದಗಳನ್ನು ಸೇರಿಸತಕ್ಕದ್ದು.

18. **69ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 69ನೇ ಪ್ರಕರಣದಲ್ಲಿ, (2)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2-ಎ) ತೆರಿಗೆದಾರನು ದಾಖಲೆಯಲ್ಲಿ ಕಂಡುಬಂದಂತೆ ಆದೇಶದಲ್ಲಿಯ ಯಾವುದೇ ತಪ್ಪನ್ನು ಸರಿಪಡಿಸಲು ಅರ್ಜಿಯನ್ನು ಸಲ್ಲಿಸಿದಲ್ಲಿ ಮತ್ತು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ತೆರಿಗೆ ನಿರ್ಧರಣಾ ಪ್ರಾಧಿಕಾರವು ಅಂಥ ಅರ್ಜಿಯನ್ನು ತಿರಸ್ಕರಿಸಿರದಿದ್ದಲ್ಲಿ, ಅಂಥ ತಪ್ಪನ್ನು ಸರಿಪಡಿಸಿ ಆದೇಶವನ್ನು ತಿದ್ದಲಾಗಿದೆಯೆಂದು ಭಾವಿಸತಕ್ಕದ್ದು."

19. **71ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 71ನೇ ಪ್ರಕರಣದಲ್ಲಿ,-

(i) (1)ನೇ ಉಪ ಪ್ರಕರಣದಲ್ಲಿ, "ಐದು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿಗಳಿಗೆ ಮೀರದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (2)ನೇ ಉಪಪ್ರಕರಣದಲ್ಲಿ "ಐದು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿಗಳಿಗೆ ಮೀರದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**20. 72ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 72ನೇ ಪ್ರಕರಣದಲ್ಲಿ,–

(i) (1)ನೇ ಉಪ ಪ್ರಕರಣದಲ್ಲಿ "ಎರಡುನೂರು ರೂಪಾಯಿಗಳ ದಂಡವನ್ನು" ಎಂಬ ಪದಗಳಿಗೆ "ಎರಡುನೂರು ರೂಪಾಯಿಗಳಿಗೆ ಮೀರದ ದಂಡವನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (3)ನೇ ಉಪಪ್ರಕರಣದಲ್ಲಿ, "ಎರಡುನೂರು ರೂಪಾಯಿಗಳ" ಎಂಬ ಪದಗಳಿಗೆ "ಎರಡುನೂರು ರೂಪಾಯಿಗಳಿಗೆ ಮೀರದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) (4)ನೇ ಉಪ ಪ್ರಕರಣದಲ್ಲಿ, "ಶೇಕಡಾ ಐವತ್ತರಷ್ಟಕ್ಕೆ ಸಮನಾದ ದಂಡಕ್ಕೆ" ಎಂಬ ಪದಗಳಿಗೆ, "ಶೇಕಡಾ ಐವತ್ತರಷ್ಟನ್ನು ಮೀರದ ದಂಡಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**21. 73ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 73ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಸಮಾನ ಮೊತ್ತದ ದಂಡಕ್ಕೂ" ಎಂಬ ಪದಗಳಿಗೆ "ಮೀರದ ದಂಡಕ್ಕೂ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**22. 74ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 74ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ,

(i) "ಐದು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ, "ಐದು ಸಾವಿರ ರೂಪಾಯಿಗಳಿಗೆ ಮೀರದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) "ಎರಡುನೂರು ರೂಪಾಯಿಗಳ" ಎಂಬ ಪದಗಳಿಗೆ, "ಎರಡು ನೂರು ರೂಪಾಯಿಗಳಿಗೆ ಮೀರದ ಹೆಚ್ಚಿನ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**23. 75ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 75ನೇ ಪ್ರಕರಣದಲ್ಲಿ, "ಐದು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿಗಳಿಗೆ ಮೀರದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**24. 76ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 76ನೇ ಪ್ರಕರಣದ, (1)ನೇ ಉಪ ಪ್ರಕರಣದಲ್ಲಿ, "ಐದು ಸಾವಿರ ರೂಪಾಯಿಗಳಿಗಿಂತ" ಎಂಬ ಪದಗಳಿಗೆ "ಒಂದು ಸಾವಿರ ರೂಪಾಯಿಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**25. 77ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 77ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ,–

(ಎ) "ಐವತ್ತು ಸಾವಿರ ರೂಪಾಯಿಗಳನ್ನು" ಎಂಬ ಪದಗಳಿಗೆ "ಇಪ್ಪತ್ತೈದು ಸಾವಿರ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) "ಹದಿನೈದು ದಿನಗಳಿಗೆ ಕಡಿಮೆಯಲ್ಲದ ಆದರೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) (2)ನೇ ಉಪಪ್ರಕರಣದಲ್ಲಿ, "ಐದು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿಗಳಿಗೆ ಮೀರದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**26. 78ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 78ನೇ ಪ್ರಕರಣದಲ್ಲಿ, "ಐವತ್ತು ಸಾವಿರ ರೂಪಾಯಿಗಳನ್ನು ಮೀರದ ಜುಲ್ಮಾನೆಯೊಂದಿಗೆ ಮತ್ತು ಹದಿನೈದು ದಿನಗಳಿಗೆ ಕಡಿಮೆಯಲ್ಲದ ಅವಧಿಯ ಆದರೆ, ಒಂದು ವರ್ಷವನ್ನು ಮೀರದ ಅವಧಿಯ ಕಾರಾವಾಸ ಶಿಕ್ಷೆಗೆ" ಎಂಬ ಪದಗಳಿಗೆ "ಇಪ್ಪತ್ತೈದು ಸಾವಿರ ರೂಪಾಯಿಗಳ ಜುಲ್ಮಾನೆಗೆ ಅಥವಾ ಒಂದು ವರ್ಷಕ್ಕೆ ಮೀರದ ಅವಧಿಯ ಕಾರಾವಾಸ ಶಿಕ್ಷೆಗೆ ಅಥವಾ ಅವರೆಡಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**27. ಒಂದನೇ ಅನುಸೂಚಿಯ ತಿದ್ದುಪಡಿ.–** ಮೂಲ ಅಧಿನಿಯಮದ ಒಂದನೇ ಅನುಸೂಚಿಯಲ್ಲಿ, 40ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ ತರುವಾಯ ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ:–

"41. ಲಾಳದ ಮೊಳೆಗಳು

42. ಪ್ಲಾಸ್ಟಿಕ್ ಬಳೆಗಳು

43. ಬ್ರ್ಯಾಂಡ್ ಇರದ ಪೊರಕೆ ಕಡ್ಡಿಗಳು

44. ಪ್ರೆಸ್ ಮಾಡಿದ ಅಥವಾ ಹಚ್ಚಿದ ಎಲೆಗಳ ತಟ್ಟೆಗಳು ಮತ್ತು ಬಟ್ಟಲುಗಳು

45. ವಿಭೂತಿ

46. ಅಬ್ಕಾರಿ ಹೆಚ್ಚುವರಿ ಸುಂಕ (ವಿಶೇಷ ಮಹತ್ವದ ಸರಕುಗಳು) ಅಧಿನಿಯಮ, 1957ರ (1957ರ ಕೇಂದ್ರ ಅಧಿನಿಯಮ 58) ಒಂದನೇ ಅನುಸೂಚಿಯ 2ನೇ ಅಂಕಣದಲ್ಲಿ ಕಾಲಕಾಲಕ್ಕೆ ವಿವರಿಸಲಾದಂಥ ಜವಳಿಗಳ ಎಲ್ಲ ಬಗೆಗಳು, ಎಂದರೆ, ಗಿರಣಿಗಳಲ್ಲಿ, ವಿದ್ಯುತ್ ಮಗ್ಗಗಳಲ್ಲಿ ಅಥವಾ ಕೈಮಗ್ಗಗಳಲ್ಲಿ ಉತ್ಪಾದಿಸಿರಲಿ, ಹತ್ತಿ, ಉಣ್ಣೆ ಅಥವಾ ರೇಯಾನ್ ಅಥವಾ ನೈಲಾನ್ ಸೇರಿದಂತೆ ಕೃತಕ ರೇಷ್ಮೆ ಬಟ್ಟೆಗಳು ಮತ್ತು (ಭಾರತದಲ್ಲಿ ತಯಾರಿಸಲಾದ ಅಥವಾ ಉತ್ಪಾದಿಸಲಾದ) ಥಾನುಗಳಲ್ಲಿರುವ ಹೊಸೈರಿ ಬಟ್ಟೆಗಳು.

47. ಅಬ್ಕಾರಿ ಹೆಚ್ಚುವರಿ ಸುಂಕ (ವಿಶೇಷ ಮಹತ್ವದ ಸರಕುಗಳು) ಅಧಿನಿಯಮ, 1957ರ (1957ರ ಕೇಂದ್ರ ಅಧಿನಿಯಮ 58) ಒಂದನೇ ಅನುಸೂಚಿಯ 2ನೇ ಅಂಕಣದಲ್ಲಿ ಕಾಲಕಾಲಕ್ಕೆ ವಿವರಿಸಲಾದಂತೆ (ಭಾರತದಲ್ಲಿ ಉತ್ಪಾದಿಸಲಾದ ಅಥವಾ ತಯಾರಿಸಲಾದ) ಸಕ್ಕರೆ.

48. ಅಬ್ಕಾರಿ ಹೆಚ್ಚುವರಿ ಸುಂಕ (ವಿಶೇಷ ಮಹತ್ವದ ಸರಕುಗಳು) ಅಧಿನಿಯಮ, 1957ರ (1957ರ ಕೇಂದ್ರ ಅಧಿನಿಯಮ 58) ಒಂದನೇ ಅನುಸೂಚಿಯ 2ನೇ ಅಂಕಣದಲ್ಲಿ ಕಾಲಕಾಲಕ್ಕೆ ವಿವರಿಸಲಾದಂತೆ (ಭಾರತದಲ್ಲಿ ಉತ್ಪಾದಿಸಲಾದ ಅಥವಾ ತಯಾರಿಸಲಾದ) ತಂಬಾಕು ಮತ್ತು ಅದರ ಎಲ್ಲಾ ಉತ್ಪನ್ನಗಳು.

**28. ಮೂರನೇ ಅನುಸೂಚಿಯ ತಿದ್ದುಪಡಿ.-** ಮೂಲ ಅಧಿನಿಯಮದ ಮೂರನೇ ಅನುಸೂಚಿಯಲ್ಲಿ,-

(i) 6ನೇ ಕ್ರಮ ಸಂಖ್ಯೆಗೆ ಸಂಬಂಧಪಡುವ ನಮೂದುಗಳಲ್ಲಿ (2)ನೇ ಅಂಕಣದಲ್ಲಿ "ಬಿದಿರು (ಬಂಬು)" ಎಂಬ ಪದಗಳ ತರುವಾಯ "ಮತ್ತು ಬೆತ್ತ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) 10ನೇ ಕ್ರಮ ಸಂಖ್ಯೆಗೆ ಸಂಬಂಧಪಡುವ ನಮೂದುಗಳಲ್ಲಿ (2)ನೇ ಅಂಕಣದಲ್ಲಿ "ಪೆರ್ಯಾಂಬುಲೇಟರ್‌ಗಳು" ಎಂಬ ಪದವನ್ನು ಮತ್ತು ವಿರಾಮ ಚಿಹ್ನೆಯನ್ನು ಬಿಟ್ಟುಬಿಡತಕ್ಕದ್ದು.

(iii) 21ನೇ ಕ್ರಮ ಸಂಖ್ಯೆಗೆ ಸಂಬಂಧಪಡುವ ನಮೂದುಗಳಲ್ಲಿ (2)ನೇ ಅಂಕಣದಲ್ಲಿ "ಎಣ್ಣೆ ತೆಗೆದ ಹಿಂಡಿಗಳು" ಎಂಬ ಪದಗಳ ತರುವಾಯ "ಆದರೆ ಪ್ರತಿಯೊಂದು 200 ಗ್ರಾಂ ಅಥವಾ 200 ಮಿ.ಲೀ.ಗಳ ಅಥವಾ ಅದಕ್ಕಿಂತ ಕಡಿಮೆ ಪ್ರಮಾಣದ ಗ್ರಾಹಕ ಸ್ಯಾಶೆಗಳಲ್ಲಿ, ಬಾಟಲಿಗಳಲ್ಲಿ ಅಥವಾ ಟಿನ್‌ಗಳಲ್ಲಿ ಮಾರಾಟ ಮಾಡಿದ, ಅಂಥ ಗ್ರಾಹಕ ಧಾರಕಗಳನ್ನು ಒಂದೇ ಧಾರಕದಲ್ಲಿ ಇಟ್ಟು ಸಗಟಾಗಿ ಮಾರಾಟ ಮಾಡಿದವುಗಳನ್ನೂ ಒಳಗೊಂಡಂತೆ ಕೊಬ್ಬರಿ ಎಣ್ಣೆಯನ್ನು ಹೊರತುಪಡಿಸಿ," ಎಂಬ ಪದಗಳನ್ನು ಸೇರಿಸತಕ್ಕದ್ದು.

(iv) 43ನೇ ಕ್ರಮ ಸಂಖ್ಯೆಗೆ ಸಂಬಂಧಪಡುವ ನಮೂದುಗಳಲ್ಲಿ (2)ನೇ ಅಂಕಣದಲ್ಲಿ "ಅಲ್ಯುಮಿನಿಯಂ, ಹಿತ್ತಾಳೆ, ಕಂಚು, ತಾಮ್ರ, ಕ್ಯಾಡ್‌ಮಿಯಮ್, ಸೀಸ ಮತ್ತು ಸತುವಿನ" ಎಂಬ ಪದಗಳಿಗೆ "ಮತ್ತು ಅಲ್ಯುಮಿನಿಯಂನ, ಹಿತ್ತಾಳೆಯ, ಕಂಚಿನ, ತಾಮ್ರದ, ಕ್ಯಾಡ್‌ಮಿಯಮ್ಮಿನ, ಸೀಸದ ಮತ್ತು ಸತುವಿನ ಎಕ್ಸ್‌ಟ್ರೂಶನ್‌ಗಳು ಮತ್ತು ಲೋಹದ ಪುಡಿ, ಉಕ್ಕಿನಿಂದ ಬಲಪಡಿಸಿದ ಎಲ್ಲ ಬಗೆಯ ಮತ್ತು ಗ್ರೇಡ್‌ಗಳ, ಲೋಹದ ಪೇಸ್ಟ್‌ಗಳು, ಮೆಟಲ್ ಸ್ಕ್ರಾಪ್‌ಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

(v) 65ನೇ ಕ್ರಮ ಸಂಖ್ಯೆಗೆ ಸಂಬಂಧಪಡುವ ನಮೂದುಗಳಲ್ಲಿ (2)ನೇ ಅಂಕಣದಲ್ಲಿ "(ಎಲೆಕ್ಟ್ರಿಕಲ್)" ಎಂಬ ಆವರಣ ಚಿಹ್ನೆಗಳು ಮತ್ತು ಪದದ ತರುವಾಯ "ಮತ್ತು ತಂತಿಗಳು ಹಾಗೂ ಉಕ್ಕಿನಿಂದ ಬಲಪಡಿಸಿದ ಅಲ್ಯುಮಿನಿಯಂ ಕಂಡಕ್ಟರ್ ನಂತಹ ಕಂಡಕ್ಟರ್‌ಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

(vi) 68ನೇ ಕ್ರಮ ಸಂಖ್ಯೆಗೆ ಸಂಬಂಧಪಡುವ ನಮೂದುಗಳಿಗೆ ಈ ಮುಂದಿನ ನಮೂದುಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"68. ಪ್ರಸಾಧನ ವಸ್ತುವಾಗಿ ಬಳಸುವ ವನಸ್ಪತಿ ತೈಲಗಳನ್ನು ಹೊರತುಪಡಿಸಿ ಎಳ್ಳೆಣ್ಣೆ, ತೌಡಿನ ಎಣ್ಣೆ, ಹರಳೆಣ್ಣೆ ಒಳಗೊಂಡಂತೆ ವನಸ್ಪತಿ ತೈಲ."

(vii) 70ನೇ ಕ್ರಮ ಸಂಖ್ಯೆ ಸಂಬಂಧಪಡುವ ನಮೂದುಗಳಲ್ಲಿ (2)ನೇ ಅಂಕಣದಲ್ಲಿ "ಅಂತಹವೇ" ಎಂಬ ಪದದ ಮೊದಲು "ಪೆನ್ನುಗಳ ರೀಫಿಲ್‌ಗಳೂ ಒಳಗೊಂಡಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(viii) 70ನೇ ಕ್ರಮ ಸಂಖ್ಯೆಗೆ ಸಂಬಂಧಪಡುವ ನಮೂದುಗಳ ತರುವಾಯ ಈ ಮುಂದಿನವುಗಳನ್ನು ಸೇರಿಸತಕ್ಕದ್ದು, ಎಂದರೆ:-

"71. ರೋಲ್ಡ್‌ಗೋಲ್ಡ್ ಮತ್ತು ನಕಲಿ ಚಿನ್ನದಿಂದ ಮಾಡಿದ ವಸ್ತುಗಳು.

72. ಕಬ್ಬಿನ ಸಿಪ್ಪೆ (ಬಗಸ್ಸೆ)

73. ಸೆಂಟ್ರಿಫೂಗಲ್, ಮನೋಬ್ಲಾಕ್ ಮತ್ತು ಸಬ್‌ಮರಿಸಬಲ್ ಪಂಪುಗಳು ಮತ್ತು ಅವುಗಳ ಭಾಗಗಳು.

74. ಜೇಡಿ ಮಣ್ಣು

75. ಕಸೂತಿಯ ಅಥವಾ ಜರಿ ವಸ್ತುಗಳು, ಎಂದರೆ ಇಮಿ, ಜರಿ, ಕಸಬ್, ಸೈಮಾ, ದಬ್ಕ, ಚುಮ್ಕಿ, ಗೋಟ, ಸಿತಾರ, ನಕ್ಸಿ, ಕೋರ, ಗಾಜುಮಣಿ, ಬದ್ಲ, ಗಿಜಲ್.

76. ಫೈರ್‌ಕ್ಲೇ, ಇದ್ದಿಲು ಬೂದಿ, ಕೋಲ್ ಬಾಯ್ಲರ್ ಬೂದಿ, ಕೋಲ್ ಸೀಡರ್ ಬೂದಿ, ಇದ್ದಿಲು ಪುಡಿ ಮತ್ತು ಕ್ಲಿಂಕರ್.

77. ಲಿಗ್ನೈಟ್.

78. ಸುಣ್ಣ, ಸುಣ್ಣದ ಕಲ್ಲು, ಸುಣ್ಣದ ಉತ್ಪನ್ನಗಳು, ಡೋಲೊಮೈಟ್ ಮತ್ತು ಇತರ ಗೋಡೆಗೆ ಸುಣ್ಣ ಹೊಡೆಯುವ ವಸ್ತುಗಳು.

79. ವೈದ್ಯಕೀಯ ಮತ್ತು ಫಾರ್ಮಾಸ್ಯುಟಿಕಲ್ ತಯಾರಿಕೆಗಳು

80. ಮಿಶ್ರ ಪಿವಿಸಿ ಸ್ಟೆಬಿಲೈಜರ್‌ಗಳು

81. 20ನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ ಬೇಳೆಗಳು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ. ದಕ್ಷಿಣಾಮೂರ್ತಿ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.